ಓ.ಎಸ್.198/2017 ಡಿ.ಡಬ್ಲು-2
*ಮಲ್ಲಮ್ಮ ಗಂಡ ದಿ. ದೇವಪ್ಪ*

ದಿ.30-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಪಾಟೀ ಸವಾಲು : ವಾದಿಯರ ಪರ ವಕೀಲರಾದ ಶ್ರೀ ಕೆ.ಕೆ.ಪಿ ರವರಿಂದ :-***

ನಿಮಗೆ ಓದಲು ಮತ್ತು ಬರೆಯಲು ಬರುತ್ತದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆ ಆಂಗ್ಲ ಭಾಷೆಯಲ್ಲಿದೆ ಇದರಲ್ಲಿ ಎಲ್ಲಾ ವಿಷಯಗಳು ಗೊತ್ತಿವೆಯಾ ಎಂದರೆ ಸಾಕ್ಷಿಯು ಗೊತ್ತಿದೆ ಎಂದು ನುಡಿಯುತ್ತಾರೆ. ನಿಮ್ಮ ಯಜಮಾನರಿಗೆ ಎಷ್ಟು ಜನ ಅಣ್ಣತಮ್ಮಂದಿರು ಎಂದರೆ ಸಾಕ್ಷಿಯು 5 ಜನ ಅಣ್ಣತಮ್ಮಂದಿರು 3 ಜನ ಹೆಣ್ಣುಮಕ್ಕಳು ಎಂದು ನುಡಿಯುತ್ತಾರೆ. ನಿಮ್ಮ ಮಾವ ಮೃತಪಟ್ಟು ಎಷ್ಟು ವರ್ಷಗಳಾಗಿರುತ್ತವೆ ಎಂದರೆ ಸಾಕ್ಷಿಯು ಅಂದಾಜು 15 ವರ್ಷಗಳು ಆಗಿರಬಹುದು ಎಂದು ನುಡಿಯುತ್ತಾರೆ. ನಿಮ್ಮ ಅತ್ತೆ ಜೀವಂತ ಇದ್ದಾರಾ ಎಂದರೆ ಸಾಕ್ಷಿಯು ಜೀವಂತಾ ಇದ್ದಾರೆ ಎಂದು ನುಡಿಯುತ್ತಾರೆ. ದಾವೆಯು ಯಾರು ಯಾರ ವಿರುದ್ದ ಹೂಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಗಂಡನ ತಂಗಿಯರು ನಮ್ಮ ಹಾಗೂ ನಮ್ಮ ಮೈದುನರ ವಿರುದ್ಧ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿಯು ಹಿರಿಯರ ಆಸ್ತಿಗಳು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳ ಮೇಲೆ ನಿನ್ನ ಗಂಡನ ಅಕ್ಕತಂಗಿಯರು ದಾವೆ ಹೂಡಿರುತ್ತಾರೆ ಎಂದರೆ ಸರಿ. ನಿಮ್ಮ ಮಾವ ಮೃತಪಟ್ಟ ಮೇಲೆ ನಿಮ್ಮ ಮನೆತನದ ಹಿರಿತನ ನಿಮ್ಮ ಅತ್ತೆ (1ನೇ ಪ್ರತಿವಾದಿ) ಮಾಡುತ್ತಿದ್ದಳು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ಇಲ್ಲಿಯವರೆಗೆ ಪಾಲು ಆಗಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಾದ ಸ.ನಂ: 87/2 ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸ.ನಂ: 87/2 ಆಸ್ತಿಯು ನಿಮ್ಮ ಗಂಡನ ಹೆಸರಿಗೆ ಇತ್ತು ಎಂದರೆ ಸರಿ. ಸ.ನಂ: 87/2 ಆಸ್ತಿಯಲ್ಲಿ ಗ್ರ್ಯಾನೆಟ್ ಇರುವುದರಿಂದ ಬಹಳ ಬೆಲೆಯುಳ್ಳದ್ದು ಎಂದರೆ ನನಗೆ ಗೊತ್ತಿಲ್ಲ. ಸ.ನಂ: 87/2 ಬಹಳ ಬೆಲೆಯುಳ್ಳದ್ದು ಇರುವುದರಿಂದ ನಿಮ್ಮ ಮಾವ ಮೃತ ಪಟ್ಟ ನಂತರ ನಿನ್ನ ಗಂಡ ಅವಿಭಕ್ತ ಕುಟುಂಬದ ಕರ್ತನಾಗಿದ್ದ ಎಂದು ಸುಳ್ಳು ಹೇಳಿ ಬರೆಸಿರುತ್ತಿರಿ ಎಂದರೆ ಸರಿಯಲ್ಲ. ಸ.ನಂ: 87/2 ನ್ನು ನಿನ್ನ ಗಂಡ ಮೃತಪಟ್ಟ ನಂತರ ಉಳಿದ ಅವಿಭಕ್ತ ಕುಟುಂಬದ ಸದಸ್ಯರಿಗೆ ಗೊತ್ತಿಲ್ಲದ ಹಾಗೆ ನಿನ್ನ ಹೆಸರಿಗೆ ಮಾಡಿಕೊಂಡಿರುತ್ತಿಯಾ ಎಂದರೆ ಸರಿಯಲ್ಲ. ಸದರಿ ವಿಚಾರ 1ನೇ ಪ್ರತಿವಾದಿಗು ಸಹ ಗೊತ್ತಿಲ್ಲದೆ ಮಾಡಿಕೊಂಡಿರುತ್ತಿರಿ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಗೆ ಗೊತ್ತಿದ್ದೆ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸ.ನಂ: 87/2 ನಿಮ್ಮ ಹೆಸರಿಗೆ ಮಾಡಿಕೊಳ್ಳುವ ಸಮಯದಲ್ಲಿ 1 ಮತ್ತು 7 ನೇ ಪ್ರತಿವಾದಿ ಹಾಗೂ ಶೇಖಪ್ಪ ತಕರಾರು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಈ ದಾವೆ ಹೂಡಲಾಗಿತ್ತು ಮತ್ತು ಈ ದಾವೆಯ ವಸ್ತು ವಿಷಯವನ್ನು ಕೂಡ ಸದರಿ ನಡವಳಿಯಲ್ಲಿ

ತಿಳಿಸಲಾಗಿತ್ತು ಎಂದರೆ ಸಾಕ್ಷಿಯು ಯಾವುದೇ ರೀತಿ ತಕರಾರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸ.ನಮ: 87/2 ಅವಿಭಕ್ತ ಕುಟುಂಬದ ಸದಸ್ಯರ ಒಪ್ಪಿಗೆ ಇಲ್ಲದೆ 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಿರಿ ಎಂದರೆ ಸಾಕ್ಷಿಯು ಸಾಲದ ಸಲುವಾಗಿ ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಮ್ಮ ಗಂಡ ದೇವಪ್ಪನಿಗೆ ಎಷ್ಟು ಸಾಲ ಮತ್ತು ಯಾರ ಯಾರ ಬಳಿ ಇತ್ತು ಎಂದರೆ ಸಾಕ್ಷಿಯು ನನ್ನ ಗಂಡ ಬೇರೆ ಬೇರೆ ಆಸ್ತಿ ಹಿಡಿದ ಕಾರಣ ಅಂದಾಜು 20-25 ಲಕ್ಷ ಸಾಲವಿತ್ತು. ಆದರೆ ಯಾರ ಬಳಿ ಇತ್ತು ಎಂದು ಅವರ ಹೆಸರು ನನಗೆ ಗೊತ್ತಿಲ್ಲ. ಈ ಆಸ್ತಿಯು ಬಹಳ ಬೆಲೆಯುಳ್ಳದ್ದು ಆಗಿರುವುದರಿಂದ ಅದನ್ನು ಮಾರಾಟ ಮಾಡಿ ಸಂಪೂರ್ಣ ಮೊತ್ತ ನೀವೆ ಪಡೆದಿರುತ್ತಿರಿ ಎಂದರೆ ಸಾಕ್ಷಿಯು ಸಾಲವಿತ್ತು ಆದಕಾರಣ ಮಾರಾಟ ಮಾಡಿ ಸಾಲ ಮುಟ್ಟಿಸಿರುತ್ತೇವೆ ಎಂದು ನುಡಿಯುತ್ತಾರೆ. ಸಾಲವಿದ್ದ ಬಗ್ಗೆ ನಿಮ್ಮ ಅತ್ತೆ ಹಾಗೂ ಮೈದುನರಿಗೆ ಹೇಳಿರುತ್ತಿರಾ ಎಂದರೆ ಸಾಕ್ಷಿಯು ಹೇಳಿರುತ್ತೇನೆ ಮಾರಿಕೊಳ್ಳಿ ಎಂದು ಹೇಳಿರುತ್ತಾರೆ ಆದಕಾರಣ ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಖರೀದಿ ಪತ್ರಕ್ಕೆ ಅವರೆಲ್ಲರ ಸಹಿ ಮಾಡಿಸಿರುತ್ತಿರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವಿಭಕ್ತ ಕುಟುಂಬದ ಸದಸ್ಯರಿಗೆ ಮೋಸ ಮಾಡುವ ಉದ್ದೇಶದಿಂದ ದಾಖಲೆ ನಿಮ್ಮ ಹೆಸರಿಗೆ ಇದ್ದುದ್ದನ್ನು ದುರ್ಬಳಕೆ ಮಾಡಿಕೊಂಡು ಮಾರಾಟ ಮಾಡಿರುತ್ತಿರಿ ಎಂದರೆ ಸರಿಯಲ್ಲ. 9 ರಿಂದ 15 ನೇ ಪ್ರತಿವಾದಿಯರ ಹೆಸರಿನಲ್ಲಿರುವ ಎಲ್ಲಾ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳೆಂದರೆ ಸರಿಯಲ್ಲ. ನೀವು ಮತ್ತು 8 ನೇ ಪ್ರತಿವಾದಿ ಕೂಡಿಕೊಂಡು ಎಲ್ಲಾ ಆಸ್ತಿಗಳು ಅವಿಭಕ್ತ ಕುಟುಂಬದ ಆಸ್ತಿಗಳೆಂದು ಮೋಸ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ನೀವು ಎಲ್ಲಾ ಆಸ್ತಿಗಳು ಅವಿಭಕ್ತ ಕುಟುಂಬದ ಆಸ್ತಿಗಳು ಎಂದು ತೋರಿಸಲು ದಾಖಲೆ ನೀಡಿರುತ್ತಿರಾ ಎಂದರೆ ಸಾಕ್ಷಿಯು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-14 ರಲ್ಲಿರುವ ನಿವೇಶನಗಳು ಸರ್ವೆ ನಂಬರ 1 ರಲ್ಲಿ ಬರುತ್ತವೆ ಎಂದರೆ ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲು : 8 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀಎ.ಎ.ಜಿ. ರವರಿಂದ</u>**

ನನ್ನ ಗಂಡ ಎಷ್ಟು ಜನ ಅಣ್ಣತಮ್ಮಂದಿರು ಎಂದರೆ ಸಾಕ್ಷಿಯು 4 ಜನ ಎಂದು ನುಡಿಯುತ್ತಾರೆ. ಅಕ್ಕತಂಗಿಯರು ಎಷ್ಟು ಜನ ಎಂದರೆ ಸಾಕ್ಷಿಯು 3 ಜನ ಎಂದು ನುಡಿಯುತ್ತಾರೆ. ನಿಮ್ಮ ಗಂಡನ ಅಣ್ಣತಮ್ಮಂದಿರು 20 ವರ್ಷಗಳ ಹಿಂದೆ ಬೇರೆಯಾಗಿರುತ್ತಾರೆ ಎಂದರೆ ಸಾಕ್ಷಿಯು ಅಡುಗೆ ಸಲುವಾಗಿ ಬೇರೆಯಾಗಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ಅತ್ತೆ 1 ನೇ ಪ್ರತಿವಾದಿ ಹಾಗೂ ನಿಮ್ಮ ಮೈದುನರಾದ 5 ರಿಂದ 7 ನೇ ಪ್ರತಿವಾದಿಯರು ಮಾಡಿದ ಸಾಲದ ಸಲುವಾಗಿ 8 ನೇ ಪ್ರತಿವಾದಿಗೆ ಸ.ನಂ: 87/2 ನ್ನು ಮಾರಾಟ ಮಾಡಿರುತ್ತಿರಿ ಎಂದರೆ ಸರಿ. ಸ.ನಂ: 87/2 ನಿನ್ನ ಗಂಡ ಮೃತಪಟ್ಟ ನಂತರ ನಿನ್ನ ಹೆಸರಿಗೆ ವರ್ಗಾವಣೆಯಾಗಿತ್ತು ಎಂದರೆ ಸರಿ. ಸದರಿ ಜಮೀನಿನ ಪಹಣಿ ಪತ್ರಿಕೆ ಜಮೀನು ಮಾರಾಟ ಮಾಡುವಾಗ ನಿಮ್ಮ

ಹೆಸರಿಗೆ ಇತ್ತು ಎಂದರೆ ಸರಿ. 1ನೇ ಪ್ರತಿವಾದಿ, 4ನೇ ವಾದಿ ಹಾಗೂ 5 ರಿಂದ 7ನೇ ಪ್ರತಿವಾದಿಯರು ಸಾಲದ ಸಲುವಾಗಿ ಸ.ನಂ: 87/2 ನ್ನು ಮಾರಾಟ ಮಾಡಲು ಹೇಳಿರುವುದರಿಂದ ಮಾರಾಟ ಮಾಡಿರುತ್ತಿರಿ ಎಂದರೆ ಸರಿ. 8ನೇ ಪ್ರತಿವಾದಿ ಸದರಿ ಜಮೀನನ್ನು ಖರೀದಿ ಮಾಡುವ ಸಂದರ್ಭದಲ್ಲಿ, ವಾದಿಯರು ಹಾಗೂ ಇನ್ನುಳಿದ ಪ್ರತಿವಾದಿಯರನ್ನು ಕೇಳಿಯೇ ಖರೀದಿಸಿರುತ್ತಾರೆ ಎಂದರೆ ಸರಿ. ಸ.ನಂ: 87/2 ಮಾರಾಟ ಆದ ನಂತರ ನಿಮ್ಮ ಮೈದುನರು ಹಾಗೂ ನಾದಿನಿಯರ ನಡುವೆ ಜಗಳವಾಗಿರುವುದರಿಂದ ಈ ದಾವೆ ಹೂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು 1, 5 ರಿಂದ 7 ಹಾಗೂ 9 ರಿಂದ 15 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಪಿ.ಎಮ್.ಬಿ ರವರಿಂದ**

1, 5 ರಿಂದ 7 ಹಾಗೂ 9 ರಿಂದ 15 ನೇ ಪ್ರತಿವಾದಿಯ ಪರ ವಕೀಲರು ವಾದಿಯರ ಪರ ವಕೀಲರು ಪಾಟೀ ಸವಾಲಿಗಾಗಿ ಅಳವಡಿಸಿಕೊಳ್ಳಲು ವಿನಂತಿಸಿಕೊಂಡಂತೆ. ಸದರ ವಾದಿಯರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.